ತಾರೀಖು 9ನೆ ನವೆಂಬರ್ 1903.

ನಂ. ಫೈ. 1226—ರೆ. ಫೈ. 31—1896-97, ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಗವರ್ನಮೆಂಟಿನ ಕಂ ಟ್ರೋಲರಾದ ಮೆ॥ ಇ. ಆರ್. ಸುಬ್ಬಾಯರ್ ಯವರು, 1903ನೆ ಸೆಪ್ಟಂಬರ್ 24ನೆ ತಾರೀಖಿನ ಮಧ್ಯಾನ್ಹಾ ಪರ ಕಂಟ್ರೋಲರ್‌ವರ ಆಫೀಸಿನ ಚಾರ್ಜ್ಜನ್ನು ಆಫೀಷಿಯೇಟಿಂಗ್ ಕಂಟ್ರೋಲರವರಾದ ಮೆ॥ ಹೆನ್ರಿ ಈಗಲ್ಸ್ ಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 10ನೆ ನವೆಂಬರ್ 1903.

ನಂ. ರೆ. 1268—ರೆ. ಫೈ. 6-1903—4, ಎಕ್ಸೈಸ್ ಕಮಿಷನರವರ ಆಫೀಸಿಗೆ ಶೇರಿದ ಆಕ್ಟಿಂಗ್ ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರಾದ ಮೆ॥ ಎ. ಗೋಪಾಲ್ಯಯ್ಯಂಗಾರ್ರು ಅವರ ಕೆಲಸದಲ್ಲಿ ಖಾಯಂ ಮಾಡಲ್ಪಟ್ಟಿರುತ್ತಾರೆ.

2. ಇದರಡೀ ಕಂಡ ಅಮಲ್ದಾರ್ರುಗಳ ಖಾಯಂಗಳು ವ ಬಡ್ತಿಗಳು ಹುಕುಂ ಮಾಡಲ್ಪಟ್ಟಿರುತ್ತವೆ :—

1ನೆ ಕ್ಲಾಸ್‌ನಲ್ಲಿ ಖಾಯಂ ಮಾಡಲ್ಪಟ್ಟವರು.

(1) ಮೆ॥ ವಿ. ಕಂಠೀರವಾಚಾರ್ರು | (2) ಮೆ॥ ಪಿ. ಸುಬ್ಬಾಯಲು ನಾಯುಡುಯವರು.

2ನೆ ಕ್ಲಾಸ್‌ನಲ್ಲಿ ಖಾಯಂ ಮಾಡಲ್ಪಟ್ಟವರು.

(1) ಮೆ॥ ಬಿ. ರಾಮಸ್ವಾಮೈಯ್ಯನವರು | (2) ಮೆ॥ ಎ. ಕೃಷ್ಣ ಅರಸಿನವರು

3ನೆ ಕ್ಲಾಸ್‌ನಲ್ಲಿ ಖಾಯಂ ಮಾಡಲ್ಪಟ್ಟವರು.

(1) ಮೆ॥ ಡಿ. ಸುಬ್ಬರಾಯರು | (2) ಮೆ॥ ಎಂ. ರಂಗನಾಥರಾಯರು

3ನೆ ಕ್ಲಾಸ್‌ನಿಂದ 2ನೆ ಕ್ಲಾಸಿಗೆ ಆಕ್ಟಿಂಗ್ ತರೀಖು ಬಡ್ತಿ ಮಾಡಲ್ಪಟ್ಟವರು.

(1) ಮೆ॥ ಆರ್. ಮಹದೇವರಾಯರು
(2) ,, ಟಿ. ಕೆ. ಸುಂದರರಾಜೈಯ್ಯಂಗಾರ್ರು | (3) ಮೆ॥ ವಿ. ಎಸ್. ಗುರುರಾಯರು

4ನೆ ಕ್ಲಾಸ್‌ನಿಂದ 3ನೆ ಕ್ಲಾಸಿಗೆ ಆಕ್ಟಿಂಗ್ ತರೀಖು ಬಡ್ತಿ ಮಾಡಲ್ಪಟ್ಟವರು.

(1) ಮೆ॥ ಟಿ. ಆರ್. ವೆಂಕಟರಾವೈಯ್ಯನವರು
(2) ,, ಹೆಚ್. ಎಸ್. ವೆಂಕಟಾಚಾರ್ರು | (3) ಮೆ॥ ಬಿ. ಎಸ್. ರಾಜೋಜಿರಾಯರು

ತಾರೀಖು 11ನೆ ನವೆಂಬರ್ 1903.

ನಂ. ರೆ. 1276, ಮೆ॥ ಬಿ. ರಾಮಸ್ವಾಮಯ್ಯನವರು ಇತರ ಕೆಲಸದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಕೋಲಾರ ಡಿಪ್ಯುಟಿ ಕಮಿಷನರವರ ಆಫೀಸ್ ಜುಡಿಷಿಯಲ್ ಹೆಡ್‌ಮುಷೀರಾದ ಎಸ್. ಧರ್ಮರಾಯರು ಚಿಂತಾಮಣಿ ತಾಲ್ಲೂಕಿನ ಅಮಲ್ದಾರ್ ವ 3ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಖು ಪೊಕರರ್ಕ್ಕಾಡಲ್ಪಟ್ಟಿರುತ್ತಾರೆ.

ತಾರೀಖು 11ನೆ ನವೆಂಬರ್ 1903.

ನಂ. ರೆ. 1281, ಸನ್1888ನೆ ಇಸವಿಯ IVನೆ ನಂಬರ್ ರೆಗ್ಯುಲೇಷನ್ ಆದ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 236ನೆ ಸೆಕ್ಷನ್ ಅನುಸರಿಸಿ, ಇದರಡೀ ಕಂಡ ಪರಭಾರೆಯಾದ ಗ್ರಾಮಗಳಿಗೆ ಸದರಿ ಕೋಡಿನ VIIರಿಂದ Xರ ವರಿಗಿನ ಅಧ್ಯಾಯುಗಳ ನಿಯಮಗಳನ್ನು ಲಗಾವ್ ಮಾಡುವ ಬಗ್ಗೆ ಮೈಸೂರ ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡುತ್ತಾರೆ :—

ತಾಲ್ಲೂಕು.	ಹೋಬಳಿ.	ಗ್ರಾಮ.
ಕೋಲಾರ	ಹುತ್ತೂರು	ಸರೆ ಹೊಸಹಳ್ಳಿ (ಕೆ. ಜಿ.)
ಡಿಟೋ	ವೇಮಗಲ್	ವೀರೇನಹಳ್ಳಿ (ಕೆ. ಜಿ.)
ಟಿ. ನರಸೀಪುರ	ರಂಗಸಮುದ್ರ	ಜೋಡಿ ಮುತ್ತತ್ತಿ

ಹುಕುಂ ಬರೋಜೇಬ್,
ಹೆಚ್. ವಿ. ನಂಜುಂಡೈಯ್ಯ,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರೆಟರಿ.

ಮುಜರೈ.

ನೋಟಿಫಿಕೇಷನ್.

ತಾರೀಖು 9ನೆ ನವೆಂಬರ್ 1903.

ನಂ. 1079, ಮೆ॥ ಎಂ. ಎಸ್. ನಾರಾಯಣರಾಯರು, ಶಿವಮೊಗ್ಗ ರೈಲ್ವೆ ಸ್ಟೇಷನ್ ಸಮೀಪದಲ್ಲಿ ತಮ್ಮ ಚಿಕ್ಕಪ್ಪನವರಿಂದ ಕಟ್ಟಲ್ಪಟ್ಟ ಶ್ರೀ ಅರಕೇಶ್ವರಸ್ವಾಮಿ ದೇವಸ್ಥಾನದ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವ ಬಗ್ಗೆ ವಿಶಿಷ್ಟ ಧರ್ಮದರ್ಶಿಯರಾಗಿ ಪೊರರ್ಕ್ಕಾಡಲ್ಪಟ್ಟಿರುತ್ತಾರೆ.

ಹುಕುಂ ಬರೋಜೇಬ್,
ಎಲ್. ಅನಂತಸ್ವಾಮಿ ರಾವ್,
ಮುಜರೈ ಇಲಾಖೆಯ ಡೆಪ್ಯುಟಿ ಸೆಕ್ರೆಟರಿ.